ಅಧ್ಯಕ್ಷರು : ನೀವು ಶಿವಾಜಿನಗರ ಕ್ಷೇತ್ರದ ಬಗ್ಗೆ ಮಾತ್ರ ಕೇಳಬೇಕು. ಬೆಂಗಳೂರು ಸುತ್ತಮುತ್ತ ಇರತಕ್ಕ ಪ್ರದೇಶಗಳ ಬಗ್ಗೆ ಕೇಳಬೇಕಾಗಿಲ್ಲ.

ಶ್ರೀ ಎಸ್. ಆರ್. ಕಾಶಪ್ಪನವರ್ : ತಾವು ಕೇಳಿರತಕ್ಕ ವಿಚಾರಕ್ಕೆ ಸ್ಪಷ್ಟವಾದ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಟೀ. ನರಸೀಂಪುರ ಪಟ್ಟಣ ಪಂಚಾಯತಿಗೆ ಮೀಸಲಿರಿಸಲಾದ ಹಣದ ಬಗ್ಗೆ.

269 (2438) : **ಡಾ: ಭಾರತಿ ಶಂಕರ್ (ಟಿ. ನರಸೀಪುರ)** : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಟಿ. ನರಸೀಪುರ ಪಟ್ಟಣ ಪಂಚಾಯತ್‌ನಲ್ಲಿ 1996-97 ರಿಂದ 1999-2000 ವರೆಗೆ ಮೀಸಲಿಡಲಾದ ಶೇಕಡಾ 18ರ ಬಾಬ್ತು ಹಣ ಎಷ್ಟು;

(ಆ) ಶೇಕಡಾ 18ರ ಹಣವನ್ನು ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ; ಮತ್ತು ಯಾವ ಯಾವ ಸೌಲಭ್ಯ ವಿತರಿಸಲಾಗಿದೆ; ಒಟ್ಟು ಖರ್ಚಾಗಿರುವ ಹಣ ಎಷ್ಟು?

(ಇ) ಖರ್ಚು ಮಾಡದೇ ಇರುವ ಮೊತ್ತವೆಷ್ಟು; ಯಾವ ಕಾರಣಕ್ಕಾಗಿ ಖರ್ಚು ಮಾಡಿರುವದಿಲ್ಲ;

(ಈ) ಟಿ. ನರಸೀಪುರ ಪಟ್ಟಣ ಪಂಚಾಯತಿಯು 1999-2000ನೇ ಸಾಲಿನ ಬಿಡುಗಡೆಯಾಗಿರುವ ಅಕ್ಟ್ಯಾಯ್ ತೆರಿಗೆ ಸ್ಟಾಂಪ್ ಡ್ಯೂಟಿ, ಮನರಂಜನಾ ತೆರಿಗೆ ಮತ್ತು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು;

(ಉ) ಈ ಅನುದಾನಗಳನ್ನು ಯಾವ ಯಾವ ಬಾಬ್ತಿಗೆ ವೆಚ್ಚ ಮಾಡಲಾಗಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ, ಎಂ (ಪೌರಾಡಳಿತ ರಾಜ್ಯ ಸಚಿವರು) :

(ಅ)

ವರ್ಷ	ಮೀಸಲಿಡಲಾದ ಶೇ. 18ರ ಹಣ
1996-97	ರೂ. 90,000-00
1997-98	ರೂ. 90,000-00
1998-99	ರೂ. 1,00.000-00
1999-2000	ರೂ. 1,00.000-00

(ಆ) 1996-97: ರೂ.

ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಕ್ಕೆ 43,000

1997-98:

ಪರಿಶಿಷ್ಟ ಜಾತಿಯವರ ಕಾಲೋನಿಗಳಲ್ಲಿ ಚರಂಡಿ ಕಾಮಗಾರಿಗಳನ್ನು ಕೈಗೊಂಡಿರುವ ಬಾಬ್ತು 78,722

1998-99:

1. ಶಾಲಾ ಮಕ್ಕಳಿಗೆ ಸಮವಸ್ತ್ರಕ್ಕಾಗಿ 19,562

2. ಪರಿಶಿಷ್ಟ ಜಾತಿಯವರ ಮತ್ತು ಪೌರ ಕಾರ್ಮಿಕರ ಕಾಲೋನಿಗೆ ಟಿ. ವಿ. ವಿತರಿಸುವ ಬಾಬ್ತು 12,000

1999-2000:

1. ಪೌರ ಕಾರ್ಮಿಕರ ಮನೆ ರಿಪೇರಿ ಬಗ್ಗೆ 14,000

2. ಪರಿಶಿಷ್ಟ ಜಾತಿಯವರ ಮತ್ತು ಪೌರ ಕಾರ್ಮಿಕರ ಕಾಲೋನಿಗಳಿಗೆ ಎರಡು ಸೆಟ್ ಭಜನೆ ಸಾಮಗ್ರಿಗಳ ಬಾಬ್ತು 19,950

3. ಪರಿಶಿಷ್ಟ ಜಾತಿಯವರಿಗೆ ಪಾತ್ರೆ ಹಾಗೂ ಅಡಿಗೆ ಉಪಕರಣಗಳನ್ನು ವಿತರಣೆ ಮಾಡಿದ ಬಾಬ್ತು 20,188

(ಇ) ರೂ. 1,55,800-00

ಪಟ್ಟಣ ಪಂಚಾಯತಿಯ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಖರ್ಚು ಮಾಡಲು ಅವಕಾಶವಿರುವುದಿಲ್ಲ. ಈ ಸಾಲಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು ನಿಗದಿಪಡಿಸಿರುವ ಹಾಗೂ ಬಾಕಿಯಾಗಿರುವ ಪೂರ್ಣ ಮೊಬಲಗನ್ನು ಪರಿಶಿಷ್ಟ ಜಾತಿಯವರ ಕಲ್ಯಾಣ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಗುವುದು.

(ಈ) ಬಿಡುಗಡೆಯಾಗಿರುವ ಅನುದಾನ

1. ಅಕ್ವಾಯ್ ಗ್ರಾಂಟ್ - ಇಲ್ಲ
2. ಸ್ಟಾಂಪ್ ಡ್ಯೂಟಿ - ರೂ. 1,67,607
3. ಮನರಂಜನಾ ತೆರಿಗೆ - ಇಲ್ಲ
4. ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ - ರೂ. 9,65,900

(ಉ)	ಖರ್ಚು ಮಾಡಿರುವ ಮೊಬಲಗು
1. ಅಕ್ಟಾಯ್ ಗ್ರಾಂಟ್	-
2. ಸ್ಟಾಂಪ್ ಡ್ಯೂಟಿ	
ಅ. ಅಭಿವೃದ್ಧಿ ಕಾಮಗಾರಿ ಮತ್ತು ವೇತನ ಪಾವತಿ	1,54,647
3. ಮನರಂಜನಾ ತೆರಿಗೆ	-
4. ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ:	
ಅ. ತರಬೇತಿ	
ಆ. ಮೈಕ್ರೋ ಎಂಟರ್ ಪ್ರೈಸಸ್	
ಇ. ಡ್ವಾಕ್ವಾ	
ಈ. ಕೂಲಿ ಉದ್ಯೋಗ ಸೃಷ್ಟಿ ಯೋಜನೆ	
ಉ. ಸಾಮಾಜಿಕ ಸೇವಾ ಕಾರ್ಯಕ್ರಮಗಳು	

ಡಾ: ಭಾರತಿ ಶಂಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇಲ್ಲಿ ಒದಗಿಸಿರುವ ಉತ್ತರ ಎಷ್ಟರಮಟ್ಟಿಗೆ ಸಮರ್ಪಕವಾಗಿದೆ ಎಂಬುದನ್ನು ನಾನು ತಿಳಿಸುತ್ತೇನೆ. 2ನೇ ಉಪ ಪ್ರಶ್ನೆಯಲ್ಲಿ ನಾನು ಕೇಳಿದ್ದೇನೆ. ಟಿ. ನರಸೀಪುರ ಪಟ್ಟಣ ಪಂಚಾಯತಿಯಲ್ಲಿ ಶೇಕಡ 18 ರಷ್ಟು ಹಣವನ್ನು ಯಾವ ಯಾವ ಕಾಮಗಾರಿಗಳಿಗೆ, ಯಾವ ಯಾವ ಇಸವಿಯಲ್ಲಿ, ಯಾವ ಯಾವ ಸೌಲಭ್ಯಕ್ಕೋಸ್ಕರ ಉಪಯೋಗಿಸಲಾಗಿದೆ ಎಂದು ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿರುವುದರಲ್ಲಿ, 1996-97 ರಲ್ಲಿ 90 ಸಾವಿರ ರೂಪಾಯಿಗಳ ಹಣ ಮೀಸಲಟ್ಟಿದ್ದೆವು, ಅದರಲ್ಲಿ 43 ಸಾವಿರ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ ಎಂದು ಹೇಳಿದ್ದಾರೆ. 1997-98 ರಲ್ಲಿ 90 ಸಾವಿರ ರೂಪಾಯಿಗಳನ್ನು ಮೀಸಲಿಟ್ಟಿದ್ದು, ಅದರಲ್ಲಿ 78 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. 1998-99 ರಲ್ಲಿ 31,562 ಸಾರಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, 1999-2000 ರಲ್ಲಿ 1 ಲಕ್ಷ ರೂಪಾಯಿಗಳು ಮೀಸಲಾಗಿದ್ದು ಕೇವಲ 54 ಸಾವಿರ ರೂಪಾಯಿಗಳು ಖರ್ಚಾಗಿದೆ. ಇಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ಈ ಒಂದು ಪರಿಹಾರ ಮೊದಲಿನಿಂದಲೂ ಆಗುತ್ತಾ ಇದೆ; 18 ಪರ್ಸೆಂಟ್ ಮೀಸಲಾತಿ ಹಣವನ್ನು ಉಪಯೋಗ ಮಾಡಿರುವುದರಲ್ಲಿ ಸರ್ಕಾರಿ ಅಧಿಕಾರಿಗಳು ಯಾವುದೇ ರೀತಿಯ ಆಸ್ಥೆಯನ್ನು ವಹಿಸುತ್ತಾ ಇಲ್ಲ. ಮಾನ್ಯ ಸಮಾಜ ಕಲ್ಯಾಣ ಸಚಿವರು ಇಲ್ಲಿ ಇದ್ದಾರೆ; ಅವರು ಸಮಾಜವಾದಿಗಳು, ಅವರ ಬಗ್ಗೆ ನಮಗೆ ಬಹಳ ಗೌರವ ಇದೆ. ಎಲ್ಲಾ ಇಲಾಖೆಗಳಲ್ಲಿ 18 ಪರ್ಸೆಂಟ್ ಹಣವನ್ನು ಯಾವ ರೀತಿ ವಿನಿಯೋಗ ಮಾಡುತ್ತಿದ್ದಾರೆ? ಎಷ್ಟನ್ನು ಲ್ಯಾಪ್ಸ್ ಮಾಡುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಅವರು ತರಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅವರ ಸಚಿವಾಲಯದಿಂದ ಏನು ಉತ್ತರಗಳನ್ನು ತರಿಸಿ ಕೊಟ್ಟಿದ್ದಾರೆ. ಅದರ ಪ್ರಕಾರ 1996 ರಿಂದ ಇಲ್ಲಿಯವರೆಗೆ ಈ 4 ವರ್ಷಗಳಲ್ಲಿ ಮೀಸಲಾಗಿದ್ದ ಹಣ 3 ಲಕ್ಷದ 80 ಸಾವಿರ ರೂಪಾಯಿಗಳು ಅದರಲ್ಲಿ ಅವರ ಲೆಕ್ಕದ ಪ್ರಕಾರ ಉಳಿದಿರುವ ಹಣ ಎಂದರೆ ಕೇವಲ ಒಂದು ಲಕ್ಷ 55 ಸಾವಿರ ರೂಪಾಯಿಗಳು ಎಂದು ಉತ್ತರ ಕೊಟ್ಟಿದ್ದಾರೆ; ಇದು ಖರ್ಚಾಗದೆ ಉಳಿದಿರುವ ಹಣ. ಆದರೆ, ನಾನು ಲೆಕ್ಕ ಹಾಕಿದ ಪ್ರಕಾರ ಖರ್ಚಾಗದೆ ಉಳಿದಿರುವ ಹಣ 1 ಲಕ್ಷದ 75 ಸಾವಿರ ರೂಪಾಯಿಗಳು ಬರುತ್ತೆ. ಕೊನೆಯ ಪಕ್ಷ ಅವರು ಲೆಕ್ಕಾಚಾರವನ್ನಾದರೂ ಸರಿಯಾಗಿ ಹಾಕುತ್ತಾ ಇಲ್ಲವೆಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

12.00 ಪಿ. ಎಂ.

ಮಾನ್ಯ ಸಚಿವರು ನನ್ನ ಕೊನೆಯ ಉಪ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಈ ಹಣ ಖರ್ಚಾಗದೇ ಇರುವುದಕ್ಕೆ ಕಾರಣವೇನು ಎನ್ನುವುದಕ್ಕೆ ಮುನಿಸಿಪಾಲಿಟಿಯವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆರ್ಥಿಕ ಪರಿಸ್ಥಿತಿ ಹೇಗೆ ಉತ್ತಮವಾಗುತ್ತದೆ ಎನ್ನುವುದನ್ನು ಸಹ ಅವರು ಈ ಸದನಕ್ಕೆ ತಿಳಿಸಿಕೊಡಬೇಕಾಗುತ್ತದೆ. 10ನೇ ಹಣಕಾಸಿನ ಯೋಜನೆಯಡಿಯಲ್ಲಿ 9 ಮಳಿಗೆಗಳನ್ನು ಕಟ್ಟಿದ್ದಾರೆ. ಒಂದು ವರ್ಷದಿಂದ ಆ ಮಳಿಗೆಗಳು ಉದ್ಘಾಟನೆಯಾಗದೇ ಖಾಲಿ ಇವೆ. ನಾನು ಮಾನ್ಯ ಸಚಿವರಾದ ಚಿಮ್ಮನಕಟ್ಟಿಯವರನ್ನು ಕಳೆದ ನವೆಂಬರ್ ತಿಂಗಳಿನಿಂದ ಕೇಳುತ್ತಿದ್ದೇನೆ, ಆ ಮಳಿಗೆಗಳನ್ನು ಉದ್ಘಾಟನೆ ಮಾಡಿ ಕೊಡಿ ಇಲ್ಲದಿದ್ದರೆ ಒಂದು ತಿಂಗಳಿಗೆ 15 ಸಾವಿರ ರೂಪಾಯಿಗಳು ನಷ್ಟವಾಗುತ್ತಿದೆ ಅಂತ. ಇದುವರೆಗೂ ಅವರಿಂದ ಆ ಮಳಿಗೆಗಳ ಉದ್ಘಾಟನೆ ಆಗಲಿಲ್ಲ. ಇಷ್ಟು ಹಣವನ್ನು ಅವರು ಇದರಲ್ಲಿಯೇ ಕೊಡಬಹುದಾಗಿತ್ತು. ಒಂದು ತಿಂಗಳಿಗೆ 15 ಸಾವಿರ ರೂಪಾಯಿಗಳೆಂದರೆ ಒಂದು ವರ್ಷಕ್ಕೆ 1 ಲಕ್ಷ 80 ಸಾವಿರ ರೂಪಾಯಿಗಳು ಬರಬೇಕಾಗಿತ್ತು. ತಾವು ಉದ್ಘಾಟನೆ ಮೂರು ಸಲ ಸಮಯ ಕೊಟ್ಟು ಮೂರು ಸಲ ಮುಂದಕ್ಕೆ ಹೋಯಿತು. ಮುನಿಸಿಪಾಲಿಟಿಗಳಲ್ಲಿ ಚೀಪ್ ಆಫೀಸರ್ಸ್ ಸಮಯಕ್ಕೆ ಸರಿಯಾಗಿ ಬರುತ್ತಿದ್ದಾರೆಯೇ? ಯಾರ್ಯಾರು ಚೀಪ್ ಆಫೀಸರ್ಸ್ ಯಾವ ಯಾವ ಮುನಿಸಿಪಾಲಿಟಿಯಲ್ಲಿ ಕಸದ ಹಾಗೆ ಕೊಳೆಯುತ್ತಿದ್ದಾರೆ? ಮತ್ತು ಅವರೆಲ್ಲ ಅಲ್ಲಿ ಬಡ್ತಿ ಹೊಂದಿದವರು. ತಾವು ಚೀಪ್ ಆಫೀಸರ್ಸ್‌ನ್ನು ಫ್ರೆಷ್ ಆಗಿ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆಯೇ? ಹಾಲಿ ಇರುವ ಚೀಫ್ ಆಫೀಸರ್ ಬಗ್ಗೆ ನಾನು ಈ ಹಿಂದೆ ಕೂಡ ಹೇಳಿದ್ದೇನೆ ಮತ್ತು ನಾನು ವೈಯಕ್ತಿಕವಾಗಿ ಅವರಿಗೆ ವಾರ್ನಿಂಗ್ ಕೊಟ್ಟಿದ್ದೇನೆ. ಡಿ. ಸಿ. ಮೂಲಕ ಅವರಿಗೆ ಹೇಳಿಸಿ ಆಗಿದೆ. ಆದರೂ ಅವರು ಸಮಯಕ್ಕೆ ಸರಿಯಾಗಿ ಕಛೇರಿಗೆ ಬರುತ್ತಿಲ್ಲ ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದಾರೆ. ಅವರು ಪ್ರಶ್ನೆ ಕೇಳಿ ಉತ್ತರ ಪಡೆಯುತ್ತಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಹೊಸ ಸದಸ್ಯರಿಗೆ ತಾವು ತರಬೇತಿಯನ್ನು ಕೊಡಬೇಕಾಗಿತ್ತು, ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ನಾಗಪ್ಪ : ಮಾನ್ಯ ಅಧ್ಯಕ್ಷರೆ, 18 ಪರ್ಸೆಂಟ್ ಹಣವನ್ನು ನಾವು ಖರ್ಚು ಮಾಡಬೇಕಾಗಿತ್ತು, ಆ ಹಣ ಹಾಗೆಯೇ ಉಳಿದುಕೊಂಡಿದೆ. ಆ ಬಗ್ಗೆ ನಾನು ಈಗಾಗಲೇ ಡಿವಿಜನ್ ಲೆವೆಲ್‌ನಲ್ಲಿ ಸಭೆಯನ್ನು ಕರೆದು ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಈ 18 ಪರ್ಸೆಂಟ್ ಹಣ ಖರ್ಚಾಗಲೇ ಬೇಕು, ಯಾವುದೇ ಕಾರಣಕ್ಕೂ ಆ ಹಣವನ್ನು ಉಳಿಸಬಾರದು ಎಂದು ನಾನು ಆದೇಶ ಕೊಟ್ಟಿದ್ದೇನೆ. ಈಗ ನಮ್ಮ ಇಲಾಖಾ ಅಧಿಕಾರಿಗಳು ಸಹ ಸ್ವತಃ ಕ್ರಮ ತೆಗೆದುಕೊಂಡಿದ್ದಾರೆ. ಮತ್ತು ನಾನು ಈಗಾಗಲೇ ಪುರಸಭಾ ಮತ್ತು ಪಟ್ಟಣ ಪಂಚಾಯತ್ ಅಧಿಕಾರಿಗಳು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5-00 ಗಂಟೆಯವರೆಗೂ ಕಛೇರಿಯಲ್ಲಿರಬೇಕೆಂದು ಆದೇಶವನ್ನು ನಾನು ಕೊಟ್ಟಿದ್ದೇನೆ. ಮತ್ತು ಅವರು ಒಂದು ವೇಳೆ ಹೊರಗಡೆ ಹೋಗಬೇಕಾದಂಥ ಪರಿಸ್ಥಿತಿ ಬಂದರೆ ಮೂವ್‌ಮೆಂಟ್ ರಿಜಿಸ್ಟರ್‌ನಲ್ಲಿ ಬರೆದು ಹೋಗಬೇಕೆಂದು ಸಹ ಹೇಳಿದ್ದೇನೆ. ತಾವು ಈಗ ಎನು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ ಆ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಡಾ: ಭಾರತಿ ಶಂಕರ್ : ಮಾನ್ಯ ಅಧ್ಯಕ್ಷರೆ, ನನಗೆ ಸಾರ್ವಜನಿಕರಿಂದ ದೂರು ಬರುತ್ತಿದೆ, ಅಲ್ಲಿನ ಚೀಪ್ ಆಫೀಸರ್ ಕಳೆದ 6 ತಿಂಗಳಿನಿಂದ ಕಛೇರಿಗೆ ಬರುತ್ತಿಲ್ಲ. ಈ ವಿಚಾರವನ್ನು ಪ್ರತಿಯೊಬ್ಬ ಸಾರ್ವಜನಿಕರೂ ನನಗೆ ತಿಳಿಸುತ್ತಿದ್ದಾರೆ. ನಗರದಲ್ಲಿ ಎಲ್ಲೆಲ್ಲಿ ನೋಡಿದರೂ ಸಹ ಕಸ ತುಂಬಿದೆ. ಅವರು ಸ್ವೀಪರ್ಸ್‌ನ್ನು ಅಪಾಯಿಂಟ್ ಮಾಡಿಕೊಂಡಿಲ್ಲ. ಈ ಬಗ್ಗೆ ತಾವು ಎನು ಕ್ರಮ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಮಾನ್ಯ ಸದಸ್ಯರು ಜವಾಬ್ದಾರಿ ತೆಗೆದುಕೊಂಡು ಕೇಳುತ್ತಿದ್ದಾರೆ. ಆ ಚೀಪ್ ಆಫೀಸರ್‌ನ್ನು ಕರೆದು, ಏಕೆ ಕಛೇರಿಗೆ ಹೋಗುತ್ತಿಲ್ಲ ಎಂದು ಕೇಳಿ ಅವರ ಮೇಲೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ್ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಅಂತಹ ಅಧಿಕಾರಿ ಮೇಲೆ ನಿಜವಾಗಿಯೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಡಾ: ಭಾರತಿ ಶಂಕರ್ : ಮಾನ್ಯ ಅಧ್ಯಕ್ಷರೆ, 18 ಪರ್ಸೆಂಟ್ ಹಣ ಖರ್ಚು ಮಾಡದೇ ಇರುವುದು ಅಕ್ಷಮ್ಯ ಅಪರಾಧ ಅಲ್ಲವೇ ಎನ್ನುವುದನ್ನು ತಿಳಿಸಬೇಕು. ಅದು ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರಿಗಾಗಿ ಖರ್ಚು ಮಾಡಬೇಕಾದಂತಹ ಹಣ. ಈ ಬಗ್ಗೆ ತಾವು ಕಾಳಜಿ ವಹಿಸಿ ಕೆಲಸ ಮಾಡಬೇಕಾಗಿತ್ತು. ತಾವು ಆ ಜನರಿಂದ ಮತ ತೆಗೆದುಕೊಂಡು ಬಂದು ಅಧಿಕಾರ ನಡೆಸುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ್ ನಾಗಪ್ಪ : 18 ಪರ್ಸೆಂಟ್ ಹಣ ಪೂರ್ತಿ ಖರ್ಚು ಮಾಡುವುದಕ್ಕೆ ನಾನು ಅಧಿಕಾರಿಗಳಿಗೆ ಹೇಳುತ್ತೇನೆ.